

بسم اللهِ الرّحمٰن الرّحيم

# ರಮಝಾನ್: ಅಲ್ಲಾಹನ ನಿಷ್ಠಾವಂತ ಸೇವಕರಾಗಿ (ಇಬಾದುರ್ರಹ್ಮಾನ್)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **08–04–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ- بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಸೂರಃ ಬಖರಃದ 187ನೆ ವಚನ ತಿಲಾವತ್ ಮಾಡಿ ಹೇಳಿದರು:*

وَاِذَا سَاَلَکَ عِبَادِیْ عَنِّیْ فَاِنِّیْ قَرِیْبٌ ؕ اُجِیْبُ دَعْوَۃَ الدَّاعِ اِذَا دَعَانِ ۙ

فَلْیَسْتَجِیْبُوْا لِیْ وَلْیُؤْمِنُوْا بِیْ لَعَلَّهُمْ یَرْشُدُوْنَ ﴿۱۸۷﴾

**ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ ಹೇಳು, ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ.**

ಅಲ್ಲಾಹನ ಅನುಗ್ರಹದಿಂದ ನಾವು ರಮಝಾನ್ ಮಾಸದಿಂದ ದಾಟಿಹೋಗುತ್ತಿದ್ದೇವೆ. ಈ ತಿಂಗಳು ದುಆ ಸ್ವೀಕಾರದ ತಿಂಗಳಾಗಿದೆ. ಅಲ್ಲಾಹನು ಈ ತಿಂಗಳಲ್ಲಿ ವಿಶಿಷ್ಟ ಅನುಗ್ರಹದ ಚಿಲುಮೆಯನ್ನು ಜಾರಿಗೊಳಿಸಿರುವನು. ಈ ಮಾಸದಲ್ಲಿ ಮನುಷ್ಯನು ತನ್ನ ಪ್ರತಿಯೊಂದು ಕೃತ್ಯವನ್ನು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಮಾಡುತ್ತಾನೆ. ಈ ಮಾಸದಲ್ಲಿ ಸ್ವರ್ಗದ ಬಾಗಿಲುಗಳು ತೆರೆಯಲ್ಪಡುವುವು ಮತ್ತು ನರಕದ ಬಾಗಿಲುಗಳು ಮುಚ್ಚಲ್ಪಡುವುವು ಹಾಗೂ ಶೈತಾನನ್ನು ಬಿಗಿಯಲಾಗುವುದು ಎಂದು ಅಲ್ಲಾಹನು ತಿಳಿಸಿದ್ದಾಗಿ ಹಝ್ರತ್ ಪೈಗಂಬರ್(ಸ) ಹೇಳಿರುವರು. ಸಾಮಾನ್ಯ ಸ್ಥಿತಿಯಲ್ಲಿ ಶೈತಾನನು ಪೂರ್ಣವಾಗಿ ಸ್ವತಂತ್ರನಾಗಿರುತ್ತಾನೆ. ಆದರೆ ರಮಝಾನ್ ಮಾಸದಲ್ಲಿ ಅವನನ್ನು ಕಟ್ಟಿಹಾಕಲಾಗುತ್ತದೆ. ಅಲ್ಲಾಹನಿಗಾಗಿ ಉಪವಾಸ ಇರಿಸುವವನನ್ನು ಅಲ್ಲಾಹನು ಸಂಪೂರ್ಣವಾಗಿ ತನ್ನ ಸಂರಕ್ಷಣೆಯ ಕೋಟೆಯೊಳಗೆ ಇರಿಸುತ್ತಾನೆ. ಉಪವಾಸಿಗನ ಪ್ರತಿಫಲ ಸ್ವತಃ ಅಲ್ಲಾಹನೇ ಆಗಿರುತ್ತಾನೆ ಎಂದು ಅವನು ಹೇಳಿರುವನು. ಇದು ಎಷ್ಟು ಹಿರಿದಾದ ಸುವಾರ್ತೆಯಾಗಿದೆ.

ನಾನು ಪಾರಾಯಣ ಮಾಡಿದ ವಚನವು ರಮಝಾನಿನ ಪ್ರಾಧಾನ್ಯ ಮತ್ತು ಅದಕ್ಕೆ ಸಂಬಂಧಿಸಿದ ಆದೇಶಗಳ ನಡುವೆ ಬರುವ ವಚನವಾಗಿದೆ. ಅದರಲ್ಲಿ ಅಲ್ಲಾಹನು ದುಆ ಸ್ವೀಕಾರದ ರೀತಿಯ ಕುರಿತು ಹೇಳಿರುವನು. ಅಲ್ಲಾಹನ ದಾಸರು ಅಥವಾ ಅಲ್ಲಾಹನ ದಾಸರಾಗಲು ಬಯಸುವವರ ಕುರಿತು ಇದರಲ್ಲಿ ಹೇಳಿರುವನು. ಅಲ್ಲಾಹನು ಹೇಳುತ್ತಾನೆ: ಭಯಪಡಬೇಡಿರಿ, ನಾನು ನಿಮ್ಮ ಸಮೀಪದಲ್ಲೇ ಇದ್ದೇನೆ. ನನ್ನ ಸಕಲ ಗುಣವೈಶಿಷ್ಟ್ಯಗಳ ಮೇಲೆ ಪರಿಪೂರ್ಣ ದೃಢವಿಶ್ವಾಸ ಮತ್ತು ನಂಬಿಕೆಯಿರಿಸಿರಿ. ಅನಂತರ ದುಆ ಸ್ವೀಕಾರದ ದೃಶ್ಯಗಳು ಯಾವ ರೀತಿಯಲ್ಲಿ ಆಗಿರುವುವು ಎಂದು ನೋಡಿರಿ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ವೈಭವಶಾಲಿಯಾದ ಅಲ್ಲಾಹನು ತನ್ನ ಸೃಷ್ಟಿಗಳಿಗಾಗಿ ತೆರೆದಿರುವ ಬಾಗಿಲು ಒಂದೇ ಆಗಿದೆ. ಅದು ದುಆದ ಬಾಗಿಲಾಗಿದೆ. ಒಬ್ಬ ವ್ಯಕ್ತಿ ಅಳಲು ಮತ್ತು ರೋದನದಿಂದ ಈ ಬಾಗಿಲಿನ ಮೂಲಕ ಪ್ರವೇಶಿಸುವಾಗ ಕೃಪಾಳುವಾದ ಅಲ್ಲಾಹನು ಅವನಿಗೆ ಪರಿಶುದ್ಧತೆ ಮತ್ತು ನಿರ್ಮಲತೆಯ ಹೊದಿಕೆಯನ್ನು ಹೊದಿಸುತ್ತಾನೆ.

ದುಆ ಸ್ವೀಕಾರಕ್ಕಾಗಿ ಎಂತಹ ಸ್ಥಿತಿಯನ್ನು ಉಂಟುಮಾಡುವ ಆವಶ್ಯಕತೆಯಿದೆ ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಯಾರು ಏನೂ ಮಾಡದೇ ದುಆ ಮಾಡುತ್ತಾನೋ ಅವನು ಮಾಡುವುದು ಪ್ರಾರ್ಥನೆಯಲ್ಲ, ಬದಲಾಗಿ ಅವನು ಅಲ್ಲಾಹನನ್ನು ಪರೀಕ್ಷೆ ಮಾಡಲು ಪ್ರಯತ್ನಿಸುತ್ತಾನೆ. ಆದ್ದರಿಂದ ದುಆ ಮಾಡುವುದಕ್ಕೆ ಮುಂಚಿತವಾಗಿ ತನ್ನ ಎಲ್ಲ ಶಕ್ತಿಗಳನ್ನು ಖರ್ಚು ಮಾಡುವುದು ಅವಶ್ಯ.

ಇದೇ ವಿಷಯವನ್ನು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿರುವನು: **ವಲ್ಲಧೀನ ಜಾಹದೂ ಫೀನಾ ಲನಹ್‌ದಿಯನ್ನಹುಂ ಸುಬುಲನಾ.** ಎಂದರೆ, ಯಾರು ನಮ್ಮನ್ನು ಭೇಟಿಯಾಗಲು ಪರಿಶ್ರಮಿಸುತ್ತಾರೋ ಅವರಿಗೆ ನಾವು ಖಂಡಿತವಾಗಿಯೂ ನಮ್ಮ ಮಾರ್ಗಗಳನ್ನು ತೋರಿಸಿ ಕೊಡುವೆವು. ಆದ್ದರಿಂದ ರಮಝಾನ್ ಮಾಸವು ವಿಶೇಷವಾಗಿ ಈ ಕಠಿಣ ಪರಿಶ್ರಮದ ಮಾಸವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸಕಲ ಬುದ್ಧಿ, ಸರ್ವ ಶಕ್ತಿ ಹಾಗೂ ಪರಿಪೂರ್ಣ ನಿಷ್ಠೆಯಿಂದ ಅಲ್ಲಾಹನನ್ನು ಹುಡುಕುವ ವ್ಯಕ್ತಿಯ ಹಾಗೆ, ಅತ್ಯಂತ ಅಜಾಗರೂಕನಾಗಿ ಆಲಸಿಗನಾಗಿರುವ ವ್ಯಕ್ತಿಯು ಅಲ್ಲಾಹನ ವರದಾನಗಳಿಂದ ಪ್ರಯೋಜನ ಪಡೆಯಲು ಹೇಗೆ ಸಾಧ್ಯ?

ಒಟ್ಟಿನಲ್ಲಿ, ದುಆಗಳ ಸ್ವೀಕಾರಕ್ಕಾಗಿಯೂ ಮೊದಲು ತನ್ನ ಸ್ಥಿತಿಗಳನ್ನು ಬದಲಿಸಿ ಅಲ್ಲಾಹನ ಕಡೆಗೆ ಹೆಜ್ಜೆ ಹಾಕುವುದು ಅವಶ್ಯ. ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ದಾಸ ನನ್ನ ಕಡೆಗೆ ಬರಲು ಒಂದು ಹೆಜ್ಜೆ ಹಾಕುವಾಗ ನಾನು ಓಡುತ್ತಾ ಅವನ ಕಡೆಗೆ ಹೋಗುತ್ತೇನೆ ಎಂದು ಅಲ್ಲಾಹನು ಹೇಳಿರುವನು. ಅಲ್ಲಾಹನಂತು ನಮ್ಮ ಮೇಲೆ ಅತ್ಯಂತ ದಯಾಳುವಾಗಿರುತ್ತಾನೆ. ಆದರೆ ಪ್ರಾಮಾಣಿಕತೆ ಮತ್ತು ನಿಷ್ಠೆ ಅದಕ್ಕಿರುವ ನಿಬಂಧನೆಗಳಾಗಿವೆ. ನಾವು ನಮಾಝ್‌ಗಳನ್ನು ನಿರ್ವಹಿಸುವೆವು, ಅಲ್ಲಾಹನ ಆದೇಶಗಳನ್ನು ಮತ್ತು ಸೃಷ್ಟಿಗಳೊಂದಿಗೆ ಮಾಡಬೇಕಾದ ಹಕ್ಕುಗಳನ್ನು ಈಡೇರಿಸುವೆವು ಎಂದು ರಮಝಾನಿನಲ್ಲಿ ವಾದಿಸಿಕೊಂಡು ರಮಝಾನ್ ದಾಟಿಹೋದ

ನಂತರ ಅಲ್ಲಾಹನನ್ನು ಮತ್ತು ಅವನ ಆದೇಶಗಳನ್ನು ಮರೆಯುವುದು ಸರಿಯಲ್ಲ. ಕರೆಯುವವನ ಕರೆಯನ್ನು ನಾನು ಆಲಿಸುತ್ತೇನೆ ಎಂದು ಅಲ್ಲಾಹನು ಹೇಳುತ್ತಾನೆ, ಆದರೆ ನನ್ನ ಪ್ರಾರ್ಥನೆಗಳನ್ನು ಆಲಿಸಲಾಗಿಲ್ಲವೆಂದು ಲೌಕಿಕತೆಯಲ್ಲಿ ಮುಳುಗಿರುವವರು ದೂರುವಂತಿಲ್ಲ. ಅಲ್ಲಾಹನಂತು ಸದಾ ತನ್ನ ದಾಸರನ್ನು ಪ್ರೀತಿಯ ಮಡಿಲಲ್ಲಿ ಇರಿಸಲು ಪ್ರಯತ್ನಿಸುತ್ತಾನೆ. ತಾಯಿಯೊಬ್ಬಳಿಗೆ ತನ್ನ ಕಾಣೆಯಾದ ಮಗು ಲಭಿಸುವಾಗ ಉಂಟಾಗುವ ಸಂತೋಷದಂತೆ ಅಥವಾ ಯಾತ್ರಿಕನೊಬ್ಬನಿಗೆ ಮರುಭೂಮಿಯಲ್ಲಿ ಸಾಮಾನುಗಳ ಸಮೇತ ಕಾಣೆಯಾದ ಒಂಟೆ ಲಭಿಸುವಾಗ ಉಂಟಾಗುವಂತಹ ಖುಶಿಯು ದಾಸನು ತನ್ನ ಕಡೆಗೆ ಬರುವಾಗ ಅಲ್ಲಾಹನಿಗೆ ಉಂಟಾಗುತ್ತದೆ.

ಆದ್ದರಿಂದ ಈ ಅನುಗ್ರಹದಿಂದ ಪಾಲುಗಾರರಾಗಲು ನಾವು ಪ್ರಯತ್ನಿಸಬೇಕು. ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಿರುವ ಕಠಿಣ ಪ್ರಯತ್ನವು ಕಡಿಮೆಯಾಗದಂತೆ ಎಚ್ಚರವಹಿಸಬೇಕು. ಇದು ಪದೇ ಪದೇ ಆಲಿಸಿ ಮನವರಿಕೆ ಮಾಡಬೇಕಾದ ಒಂದು ವಿಷಯವಾಗಿದೆ. ಆದ್ದರಿಂದ ಈ ವಿಷಯಕ್ಕೆ ಸಂಬಂಧಪಟ್ಟು ಹಝ್ರ‌ತ್ ಮಸೀಹ್ ಮೌಊದ್(ಅ)ರ ಕೆಲವು ಉಪದೇಶಗಳನ್ನು ಮುಂದಿರಿಸುತ್ತೇನೆ.

ಅವರು ಹೇಳುತ್ತಾರೆ: ಯಾವ ರೀತಿಯಲ್ಲಿ ನಮ್ಮ ಲೌಕಿಕ ಜೀವಿತದಲ್ಲಿ ಪ್ರತಿಯೊಂದು ಕೃತ್ಯಕ್ಕಾಗಿ ಒಂದು ಖಚಿತ ಪರಿಣಾಮವಿರುತ್ತದೆಯೋ ಅದೇ ರೀತಿಯಲ್ಲಿ ದೀನಿಗೆ ಸಂಬಂಧಿಸಿಯೂ ಇದೇ ಕಾನೂನು ಇದೆ. ಅಲ್ಲಾಹನ ಅನ್ವೇಷಣೆಯಲ್ಲಿ, ಹುಡುಕಾಟದಲ್ಲಿ ಪರಿಪೂರ್ಣ ಪ್ರಯತ್ನ ಮಾಡುವವರಿಗಾಗಿ ನಾವು ನಮ್ಮ ಮಾರ್ಗವನ್ನು ತೋರಿಸುವೆವು. ಅಂತೆಯೇ ಯಾರು ವಕ್ರತೆ ತೋರಿಸುತ್ತಾರೋ ಹಾಗೂ ಸನ್ಮಾರ್ಗದಲ್ಲಿ ನಡೆಯಲು ಬಯಸುವುದಿಲ್ಲವೋ ಅವರ ಹೃದಯಗಳನ್ನು ನಾವು ವಕ್ರಗೊಳಿಸುವೆವು ಎಂದು ಅಲ್ಲಾಹನು ಈ ಎರಡು ಉದಾಹರಣೆಗಳನ್ನು ನೀಡಿ ಸ್ಪಷ್ಟವಾಗಿ ಹೇಳುತ್ತಾನೆ.

ಹಝ್ರ‌ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮನುಷ್ಯನ ಹೃದಯದಲ್ಲಿ ಅನೇಕ ವಿಧದ ಸ್ಥಿತಿಗಳು ಉಂಟಾಗುತ್ತವೆ. ಅಲ್ಲಾಹನು ಸಜ್ಜನರ ಆತ್ಮಗಳ ದೌರ್ಬಲ್ಯವನ್ನು ದೂರಮಾಡುತ್ತಾನೆ ಹಾಗೂ ಪರಿಶುದ್ಧತೆ ಮತ್ತು ಒಳಿತಿನ ಶಕ್ತಿಯನ್ನು ಅವರಿಗೆ ಕೊಡುಗೆಯಾಗಿ ನೀಡುತ್ತಾನೆ. ಯಾರು ನಮ್ಮ ಮಾರ್ಗದಲ್ಲಿ ಕಠಿಣ ಪ್ರಯತ್ನ ಮಾಡುವರೋ ನಾವು ಅವರಿಗೆ ನಮ್ಮ ಮಾರ್ಗಗಳನ್ನು ತೋರಿಸುಕೊಡುವೆವು ಎಂದು ಅಲ್ಲಾಹನು ವಾಗ್ದಾನ ನೀಡಿದ್ದಾನೆ. ಮತ್ತೊಂದೆಡೆ "ನಮ್ಮನ್ನು ನೇರವಾದ ಮಾರ್ಗದಲ್ಲಿ ನಡೆಸು" ಎಂಬ ಪ್ರಾರ್ಥನೆಯನ್ನೂ ಕಲಿಸಿಕೊಟ್ಟಿರುವನು. ಆದ್ದರಿಂದ ಇದನ್ನು ಮುಂದಿರಿಸಿಕೊಂಡು ಅಭಿವೃದ್ಧಿ ಹಾಗೂ ದಿವ್ಯದೃಷ್ಟಿ ಗಳಿಸಿದವರೊಂದಿಗೆ ಸೇರುವಂತಾಗಲು ಮನುಷ್ಯನು ನಮಾಝಿನಲ್ಲಿ ರೋದನದೊಂದಿಗೆ ಮತ್ತು ಅದನ್ನು ಗಳಿಸುವ ಆಶೆಯೊಂದಿಗೆ ದುಆ ಮಾಡಬೇಕು.

ಖಾದಿಯಾನಿನ ಒಂದು ಘಟನೆಯನ್ನು ಒಬ್ಬರು ಹೀಗೆ ವರದಿ ಮಾಡಿರುವರು: ಹಝ್ರ‌ತ್ ಮಸೀಹ್ ಮೌಊದ್(ಅ)ರ ಸಹಾಬಿಯೊಬ್ಬರು ಮಸ್‌ಜಿದ್ ಮುಬಾರಕ್‌ನಲ್ಲಿ ಒಂದು ಮೂಲೆಯಲ್ಲಿ ನಿಂತುಕೊಂಡು ನಮಾಝಿನಲ್ಲಿ ಬಹಳ ಭಾವುಕರಾಗಿ ಮತ್ತು ದೇವಭಯದಿಂದ ಕೈಯನ್ನು ಕಟ್ಟಿಕೊಂಡು ದುಆ ಮಾಡುತ್ತಿದ್ದರು. ಗಮನವಿಟ್ಟು ಆಲಿಸಿದಾಗ ಅವರು **ಇಹ್‌ದಿನಸ್ಸಿರಾತಲ್ ಮುಸ್ತಖೀಂ** ಎಂಬ ವಚನವನ್ನು ಪದೇ ಪದೇ ಓದುತ್ತಿರುವುದಾಗಿ ತಿಳಿದುಬಂತು.

ಹಝ್ರ‌ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಲೋಕದಲ್ಲಿ ನಡೆಯುವ ಎಲ್ಲ ಕೆಲಸಗಳಿಗಾಗಿ ಮೊದಲು ಮನುಷ್ಯನು ಏನಾದರೂ ಮಾಡಬೇಕಾಗುತ್ತದೆ. ಮನುಷ್ಯನು ಅದಕ್ಕಾಗಿ ಕೈಕಾಲುಗಳನ್ನು ಚಲಾಯಿಸುವಾಗ ಅಲ್ಲಾಹನು ಕೂಡ ಅನುಗ್ರಹಿಸುತ್ತಾನೆ. ಅದೇ ರೀತಿಯಲ್ಲಿ, ಅಲ್ಲಾಹನ ಮಾರ್ಗದಲ್ಲಿ ಕಠಿಣ ಪ್ರಯತ್ನ ಮಾಡುವವರೇ ಶ್ರೇಷ್ಠತೆಯನ್ನು ಗಳಿಸುತ್ತಾರೆ. ಅಲ್ಲಾಹನನ್ನು ಗಳಿಸಲಿಕ್ಕಾಗಿ ಪರಿಶ್ರಮದ ಆವಶ್ಯಕತೆಯಿದೆ. ಯಾವ ರೀತಿಯಲ್ಲಿ ಪ್ರಯತ್ನವಿಲ್ಲದೇ ಮತ್ತು ನೀರುಣಿಸದೇ ಮಣ್ಣಿನಲ್ಲಿ ಬಿತ್ತಲಾದ ಬೀಜವು ಫಲಪ್ರದವಾಗದೇ ನಾಶವಾಗುವುದೋ ಅದೇ ರೀತಿಯಲ್ಲಿ ನಮಗೆ ಸಹಾಯನೀಡು ಎಂದು ಸದಾ ಪ್ರಾರ್ಥಿಸದೇ ಮತ್ತು ದುಆಗಳನ್ನು ಪ್ರತಿದಿನ ಮಾಡದೇ ಇದ್ದರೆ ದೈವಿಕ ಕೃಪೆ ವರ್ಷಿಸಲಾರದು. "ಯಾರು ನಮ್ಮನ್ನು ಭೇಟಿಯಾಗಲು ಪರಿಶ್ರಮಿಸುತ್ತಾರೋ ಅವರಿಗೆ ನಾವು ಖಂಡಿತವಾಗಿಯೂ ನಮ್ಮ ಮಾರ್ಗಗಳನ್ನು ತೋರಿಸಿ ಕೊಡುವೆವು." ಎಂಬ ವಚನದಲ್ಲಿ ಇದರ ಕಡೆ ಸೂಚನೆಯಿದೆ. ಅವನು ಮಾಡಬೇಕಾದಷ್ಟು ಪ್ರಯತ್ನವನ್ನು ಅವನು ಮಾಡಬೇಕು. ಹತ್ತು ಅಡಿ ಕೆಳಗೆ ಅಗೆಯುವುದರಿಂದ ನೀರು ಲಭಿಸುವುದು ಎಂದಾದರೆ, ಅವನು ಎರಡು ಅಡಿಯಷ್ಟು ಅಗೆದು ಆಯಾಸಗೊಳ್ಳಬಾರದು. ಜನರು ಲೋಕದ ಚಿಂತೆಯಲ್ಲಿ ನೋವನ್ನು ಸಹಿಸಿಕೊಳ್ಳುತ್ತಾರೆ. ಎಲ್ಲಿಯ ವರೆಗೆಂದರೆ, ಕೆಲವರು ಅದರಲ್ಲೇ ನಾಶವಾಗುತ್ತಾರೆ. ಆದರೆ ಅಲ್ಲಾಹನಿಗಾಗಿ ಒಂದು ಮುಳ್ಳು ಚುಚ್ಚುವಷ್ಟು ನೋವನ್ನು ಕೂಡ ಸಹಿಸಲು ಅವರು ಇಷ್ಟಪಡುವುದಿಲ್ಲ.

ನಮ್ಮ ಮಾರ್ಗದಲ್ಲಿ ಪ್ರಯತ್ನಿಸುವವನು ಮಾರ್ಗವನ್ನು ಪಡೆಯುವನು ಎಂದು ಅಲ್ಲಾಹನು ಹೇಳತ್ತಾನೆ. ಅದರ ಅರ್ಥವೇನೆಂದರೆ, ಈ ಮಾರ್ಗದಲ್ಲಿ ಪ್ರವಾದಿಯೊಂದಿಗೆ ಸೇರಿಕೊಂಡು ನಿರಂತರ ಪ್ರಯತ್ನ ಮಾಡಬೇಕಾಗುವುದು. ಒಂದೆರಡು ಗಂಟೆಗಳ ನಂತರ ಓಡಿಹೋಗುವುದು ಪರಿಶ್ರಮಿಯ ಕೆಲಸವಲ್ಲ.

ಪಶ್ಚಾತ್ತಾಪ ಮತ್ತು ಕ್ಷಮೆಯಾಚನೆಯ (ತೌಬ ಮತ್ತು ಇಸ್ತಿಗ್‌ಫಾರ್) ಕಡೆಗೆ ಗಮನ ಸೆಳೆಯುತ್ತಾ ಹಝ್ರ‌ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪಶ್ಚಾತ್ತಾಪ ಮತ್ತು ಕ್ಷಮೆಯಾಚನೆ ಅಲ್ಲಾಹನನ್ನು ಗಳಿಸಲು ಇರುವ ಮಾರ್ಗವಾಗಿದೆ..... ಸಹಾಬಿಯರ ಜೀವಿತವನ್ನು ನೋಡಿರಿ. ಅವರು ಕೇವಲ ಮಾಮೂಲಿ ನಮಾಝ್‌ಗಳಿಂದಲೇ ಆ ಉನ್ನತ ಪದವಿಗಳನ್ನು ಗಳಿಸಿದ್ದರೇ? ಅಲ್ಲ, ಬದಲಾಗಿ ಅವರು ಅಲ್ಲಾಹನ ಸಂಪ್ರೀತಿಗಾಗಿ ತಮ್ಮ ಜೀವಗಳ ಕೂಡ ಪರಿವೆ ಮಾಡಲಿಲ್ಲ. ಆಡುಕುರಿಗಳ ಹಾಗೆ ಬಲಿದಾನವಾದರು. ಅಷ್ಟನ್ನು ಮಾಡಿದಾಗಲೇ ಅವರು ಆ ಸ್ಥಾನವನ್ನು ಗಳಿಸಿದರು.

ನೆನಪಿಡಿರಿ, ದುಆ ಒಂದು ಮರಣವಾಗಿದೆ. ಯಾವ ರೀತಿಯಲ್ಲಿ ಮರಣದ ಸಮಯದಲ್ಲಿ ಬೇಗುದಿ ಮತ್ತು ತಳಮಳವಿರುತ್ತದೋ ಅದೇ ರೀತಿಯಲ್ಲಿ ದುಆಗಾಗಿಯೂ ಅಂತಹದ್ದೇ ತಳಮಳ ಮತ್ತು ಆವೇಶ ಇರಬೇಕಾದದ್ದು ಆವಶ್ಯಕ.... ಇದನ್ನು ಸಹ ನೆನಪಿನಲ್ಲಿಡಿರಿ, ಮೊತ್ತಮೊದಲು ಮಾಡಬೇಕಾದ ಮತ್ತು ದುಆಗಳಲ್ಲಿ ಪ್ರಧಾನ ಮತ್ತು ಆವಶ್ಯಕ ಪ್ರಾರ್ಥನೆಯೇನೆಂದರೆ, ಮನುಷ್ಯನು ಸ್ವತಃ ಪಾಪಗಳಿಂದ ಪರಿಶುದ್ಧ ಮತ್ತು ಸ್ವಚ್ಛವಾಗಲಿಕ್ಕಾಗಿ ದುಆ ಮಾಡಬೇಕು ಎಂಬುದಾಗಿದೆ. ಈ ದುಆ ಸ್ವೀಕಾರವಾದರೆ ಮತ್ತು ಮನುಷ್ಯನು ಎಲ್ಲ ರೀತಿಯ ಕೊಳಕು ಮತ್ತು ಮಾಲಿನ್ಯಗಳಿಂದ ಪರಿಶುದ್ಧನಾಗಿಕೊಂಡು ಅಲ್ಲಾಹನ ದೃಷ್ಟಿಯಲ್ಲಿ ಪವಿತ್ರನಾದರೆ, ಮನುಷ್ಯನು ಲೌಕಿಕವಾದ ಆವಶ್ಯಕತೆಗಳಿಗಾಗಿ ದುಆಗಳನ್ನು ಮಾಡಬೇಕಾದ ಆವಶ್ಯಕತೆಯೇ ಇರುವುದಿಲ್ಲ. ಅವುಗಳು ಸ್ವತಃವೇ ಸ್ವೀಕಾರವಾಗುತ್ತಾ ಹೋಗುತ್ತವೆ. ಯಾರು ದುಆದ ಪರಿವೆ ಮಾಡುವುದಿಲ್ಲವೋ ಮತ್ತು ಅದರಿಂದ ದೂರವಿರುತ್ತಾನೋ ಅಲ್ಲಾಹನು ಕೂಡ ಅವನ ಪರಿವೆ ಮಾಡುವುದಿಲ್ಲ ಹಾಗೂ ಅವನಿಂದ ದೂರವಾಗುತ್ತಾನೆ. ಅವಸರಪಡುವುದು ಇಲ್ಲಿ ಪ್ರಯೋಜನಕಾರಿಯಲ್ಲ.

ಅಲ್ಲಾಹನು ನಮಗೆ ಈ ಸಂಗತಿಗಳನ್ನು ಮಾಡಲು ಸೌಭಾಗ್ಯ ನೀಡಲಿ. ಈ ರಮಝಾನನ್ನು ನಮಗೆ ಅಲ್ಲಾಹನೊಂದಿಗೆ ಸುದೃಢವಾದ ಸಂಬಂಧ ಜೋಡಿಸುವಂತಹದನ್ನಾಗಿ ಮಾಡಲಿ. ಲೋಕದ ಸ್ಥಿತಿಗತಿಗಳಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಲೋಕವನ್ನು ನಾಶನಷ್ಟಗಳಿಂದ ರಕ್ಷಿಸಲಿ. ಜನರಿಗೆ ವಿವೇಕವನ್ನು ನೀಡಲಿ. ಈ ಜನರು ತಮ್ಮ ಸೃಷ್ಟಿಕರ್ತನನ್ನು ಅರಿಯುವಂತಾಗಲಿ.

(ಹುಝೂರ್ ಹೇಳಿದರು:) ಜುಮಾದ ನಂತರ ಎಂ.ಟಿ.ಎ. ತಯಾರಿಸಿದ ಒಂದು ವೆಬ್‌ಸೈಟಿನ ಮತ್ತು ಮೊಬೈಲ್ ಆಪ್ಲಿಕೇಶನಿನ ಉದ್ಘಾಟನೆಯನ್ನು ನಾನು ಮಾಡುವೆನು. ಇದರಲ್ಲಿ 313 ಸಹಾಬಿಯರ ಕುರಿತು ನಾನು ನೀಡಿರುವ ಖುತ್ಬಗಳನ್ನು ಒಟ್ಟುಸೇರಿಸಲಾಗಿದೆ. ಈ ವೆಬ್‌ಸೈಟಿನಲ್ಲಿ ಓದುಗರು ಬದರೀ ಸಹಾಬಿಯರ ಕುರಿತು ತಯಾರಿಸಲಾಗಿರುವ ಪ್ರೊಫೈಲ್‌ಗಳನ್ನು ಓದಬಹುದಾಗಿದೆ. ಪ್ರತಿ ಸಹಾಬಿಯರ ಕುರಿತು ಪ್ರಶ್ನೋತ್ತರದ ಒಂದು ಪಂಕ್ತಿ ಇದೆ. ಅದೇ ರೀತಿಯಲ್ಲಿ ಉಪಯುಕ್ತವಾದ ನಕಾಶೆಗಳು, ಕಠಿಣ ಪದಗಳ ಅರ್ಥಗಳು ಮತ್ತು ಹೆಸರುಗಳ ಅರಬಿ ಉಚ್ಚಾರಣೆ ಕೂಡ ಆಲಿಸಬಹುದಾಗಿದೆ.

ಅಲ್ಲಾಹನು ಈ ವೆಬ್‌ಸೈಟನ್ನು ಜನರಿಗೆ ಪ್ರಯೋಜನಕಾರಿಯನ್ನಾಗಿ ಮಾಡಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 08-04-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon